# ಆರನೇ ತರಗತಿಯಿಂದ ಶಾಲೆ ಮುಚ್ಚೋದು ಬೇಡ: ಹೊರಟ್ಟಿ

## ನಗರಕ್ಕೆ ಅನ್‌ಲೈನ್ ಓಕೆ ಹಳ್ಳಿಗಳಿಗೆ ಏಕೆ?!



**ಉದಯಕಾಲ ನ್ಯೂಸ್**

**ಬೆಂಗಳೂರು:** ಮೂರನೇ ಅಲೆಯಲ್ಲಿ ಕೋವಿಡ್‌ನ ಗಂಭೀರತೆ ಕಮ್ಮಿ. ಸೋಂಕು ಹರಡೋದು ಜಾಸ್ತಿ ಎಂದು ತಜ್ಞರು ಹೇಳ್ತಿದಾರೆ. ಆದ ಕಾರಣ ಒಂದರಿಂದ ಐದನೇ ತರಗತಿವರೆಗೆ ಮಾತ್ರ ಶಾಲೆಗಳನ್ನು ಮುಚ್ಚಲಿ. 6 ನೇ ತರಗತಿಗಳಿಂದ ತರಗತಿಗಳು ಮುಚ್ಚುವುದು ಬೇಡ ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅಭಿಪ್ರಾಯಪಟ್ಟರು.

ತಮ್ಮ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಕೋವಿಡ್ ನಿಯಮಾವಳಿಗಳನ್ನು ಪಾಲಿಸಿ ಶಾಲೆಗಳನ್ನು ನಡೆಸಲಿ. ಪೋಷಕರ ಆತಂಕವನ್ನು ಸರ್ಕಾರ ದೂರ ಮಾಡಿ 6ನೇ ತರಗತಿಯಿಂದ ಆರಂಭಿಸಿ ಮುಂದಿನ ಹಂತದ ತರಗತಿಗಳನ್ನು ನಡೆಸಲಿ. ಶಾಲೆಗಳನ್ನು ಬಂದ್ ಮಾಡಿದರೆ ಮಕ್ಕಳ ಕಲಿಕೆ ಮೇಲೆ ದುಷ್ಪರಿಣಾಮವಾಗುತ್ತದೆ. ವಿದ್ಯಾಗಮ ಯೋಜನೆಯಿಂದ ಹೆಚ್ಚು ಉಪಯೋಗವಾಗುವುದಿಲ್ಲ ಎಂದು ಹೇಳಿದರು.

ಪುಟ 05

ಉದಯಕಾಲ

# ಆರನೇ ತರಗತಿಯಿಂದ ಶಾಲೆ ಮುಚ್ಚೋದು ಬೇಡ: ಹೊರಟ್ಟಿ

ಮೊದಲನೇ ಪುಟದಿಂದ...

ಶಾಲೆಗಳ ವಿಚಾರದಲ್ಲಿ ಸರ್ಕಾರ ಸ್ಪಷ್ಟ ನಿರ್ಧಾರ ಕೈಗೊಳ್ಳಲಿ. ಜಿಲ್ಲಾವಾರು ಡಿಸಿಗಳಿಗೆ ಅಧಿಕಾರ ಕೊಡಲಾಗಿದೆ. ಜಿಲ್ಲಾವಾರು ಅಲ್ಲಲ್ಲಿ ಶಾಲೆಗಳು ಮುಚ್ಚೋದು, ನಡೆಯೋದು ಮಾಡಿದ್ರೆ ಗೊಂದಲ ಉಂಟಾಗುತ್ತದೆ. ಇಡೀ ರಾಜ್ಯದಲ್ಲಿ ಶಾಲೆಗಳನ್ನು ನಡೆಸುವ ವಿಚಾರದಲ್ಲಿ ಸರ್ಕಾರ ನಿರ್ಧಾರ ಕೈಗೊಳ್ಳಲಿ ಎಂದು ಹೊರಟ್ಟಿ ಅವರು ಸರ್ಕಾರಕ್ಕೆ ಸಲಹೆ ಮಾಡಿದರು.

ಆನ್‌ಲೈನ್ ತರಗತಿಗಳು ಎಲ್ಲ ಕಡೆ ಯಶಸ್ವಿ ಆಗಲ್ಲ. ನೆಟ್ವರ್ಕ್, ವಿದ್ಯುತ್ ಸಮಸ್ಯೆಗಳಿವೆ. ಹಳ್ಳಿಗಳ ಜನರ ಬಳಿ ಸ್ಮಾರ್ಟ್ ಫೋನ್ ಸಹ ಇರಲ್ಲ. ಆನ್ ಲೈನ್ ತರಗತಿಗಳು ನಾಮ್ ಕೆ ವಾಸ್ತೆಗೆ ಮಾತ್ರ. ನಗರಗಳಿಗೆ ಆನ್‌ಲೈನ್ ಸರಿ ಹೊಂದುತ್ತದೆ. ಗ್ರಾಮೀಣ ಭಾಗಗಳಲ್ಲಿ ಆನ್‌ಲೈನ್ ತರಗತಿಗಳು ಯಶಸ್ವಿ ಆಗಲ್ಲ ಎಂದು ಹೇಳಿದರು.

ಉದಯಕಾಲ

# ಪರಿಷತ್ತಿನ ಸಚಿವಾಲಯದ ಸಿಬ್ಬಂದಿಗೆ ಅಗತ್ಯ ಸೌಲಭ್ಯ ಒದಗಿಸಲು ಹೊರಟ್ಟಿ ಸೂಚನೆ

**ಸ್ವಚ್ಛತೆ ಜತೆಗೆ ಸೌಂದರೀಕರಣಕ್ಕೆ ಆದ್ಯತೆಗೆ ಸಲಹೆ**



**ಉದಯಕಾಲ ನ್ಯೂಸ್**

**ಬೆಂಗಳೂರು:** ಎಲ್ಲಾ ಕೆಲಸಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಿ, ಪರಿಷತ್ತಿನ ಸಚಿವಾಲಯದ ಸಿಬ್ಬಂದಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸುವಂತೆ ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಎಸ್ ಹೊರಟ್ಟಿ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಅವರು ವಿಧಾನ ಪರಿಷತ್ತಿನ ಸಚಿವಾಲಯದ ಕಛೇರಿಗಳಿಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ವಿಧಾನ ಪರಿಷತ್ತಿನ ಸಿಬ್ಬಂದಿಗಳಿಗೆ ಸ್ಥಳಾವಕಾಶದ ಕೊರತೆ ಇದೆಯೆಂಬ ಮಾಹಿತಿ ಪಡೆದ ಸಭಾಪತಿಗಳು ವರದಿಗಾರರ ಶಾಖೆಯ ಸಿಬ್ಬಂದಿಗಳಿಗೆ ಸಮರ್ಪಕವಾಗಿ ಕಾರ್ಯನಿರ್ವಹಿಸಲು ಸೂಕ್ತ ಸ್ಥಳಾವಕಾಶ ಹಾಗೂ ದಾಖಲೆಗಳನ್ನು ಸಂಗ್ರಹಿಸಿಡಲು ಅಗತ್ಯ ಸೌಲಭ್ಯ ಕಲ್ಪಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ವಿಧಾನ ಪರಿಷತ್ತಿನ ಸಚಿವಾಲಯದ ವಿವಿಧ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರಿಗೆ ಸೂಕ್ತ ಆಸನದ ವ್ಯವಸ್ಥೆ ಕೊರತೆ ಇದ್ದು, ಅದನ್ನುಕೂಡಲೇ ಸರಿಪಡಿಸಬೇಕು ಹಾಗೂ ಕಛೇರಿಯ ಆವರಣದಲ್ಲಿ ಪೂರಕ ವಾತಾವರಣ ಸೃಷ್ಟಿಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸಲಹೆ ನೀಡಿದರು.

ಸಚಿವಾಲಯದ ಕಛೇರಿಗಳ ಕಟ್ಟಡದ ಒಳಾಂಗಣದಲ್ಲಿ ಸ್ವಚ್ಛತೆ ಕಾಪಾಡುವುದರ ಜೊತೆಗೆ ಕಟ್ಟಡ ಸೌಂದರೀಕರಣಕ್ಕೆ ಆದ್ಯತೆ ನೀಡುವಂತೆ ನಿರ್ದೇಶಿಸಿದರು. ರಾಜ್ಯದಲ್ಲಿ ದಿನದಿಂದ ದಿನಕ್ಕೆ ಕೋವಿಡ್-19 ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ರಾಜ್ಯಸರ್ಕಾರ ಜಾರಿಗೊಳಿಸಿರುವ ಎಲ್ಲಾ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ತಿಳಿಸಿದರು.

ಉದಯಕಾಲ